# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು: | ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1295 |
| ಉತ್ತರಿಸ ಬೇಕಾದ ದಿನಾಂಕ: | 18.03.2020 |
| ಉತ್ತರಿಸುವ ಸಚಿವರು | ಶ್ರೀ ವಿ.ಸೋಮಣ್ಣ, ವಸತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಾರವಾರ ಜಿಲ್ಲೆಯಲ್ಲಿ ವಸತಿ ರಹಿತ ಕುಟುಂಬಗಳನ್ನು ಗುರುತಿಸುವ ಕಾರ್ಯ ಮುಕ್ತಾಯವಾಗಿದೆಯೇ;<br>ಮುಕ್ತಾಯವಾಗಿದ್ದಲ್ಲಿ, ಬೇರೆ ಬೇರೆ ಯೋಜನೆಯಡಿ 2010 ರಿಂದ ಇಲ್ಲಿಯವರೆಗೆ ಯೋಜನೆವಾರು ಆಗಿರುವ ಗುರಿ ಎಷ್ಟು; ವರ್ಷವಾರು ಸಂಪೂರ್ಣ ಮಾಹಿತಿ ನೀಡಲಾಗುವುದು; (ಯೋಜನೆವಾರು, ಜಿಲ್ಲಾವಾರು/ ತಾಲ್ಲೂಕುವಾರು ವಿವರ ನೀಡುವುದು) | ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) ಅಡಿಯಲ್ಲಿ ಸಾಮಾಜಿಕ ಆರ್ಥಿಕ ಜಾತಿ ಜನಗಣತಿ 2011 ರ ಪಟ್ಟಿಗೆ ಅರ್ಹ ಫಲಾನುಭವಿಗಳನ್ನು ಸೇರಿಸಿ, ಶಾಶ್ವತ ಪಟ್ಟಿಯನ್ನು ತಯಾರಿಸಲು ಕೇಂದ್ರ ಸರ್ಕಾರದ ನಿರ್ದೇಶನದಂತೆ 2018 ರಲ್ಲಿ ರಾಜ್ಯಾದ್ಯಂತ ವಸತಿ ರಹಿತರ ಹಾಗೂ ನಿವೇಶನ ರಹಿತರ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. ಇದರನ್ವಯ ಉತ್ತರ-ಕನ್ನಡ ಜಿಲ್ಲೆಯಲ್ಲಿ 32511 ವಸತಿ ರಹಿತರು, 30157 ನಿವೇಶನ ರಹಿತರಿದ್ದು, ಒಟ್ಟು 62668 ವಸತಿ/ ನಿವೇಶನ ರಹಿತರಿದ್ದಾರೆ.<br><br>ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಅಡಿಯಲ್ಲಿ ಅರ್ಹ ಫಲಾನುಭವಿಗಳ ಶಾಶ್ವತ ಪಟ್ಟಿಯನ್ನು ತಯಾರಿಸಲು ಕೇಂದ್ರ ಸರ್ಕಾರದ ನಿರ್ದೇಶನದಂತೆ ರಾಜ್ಯಾದ್ಯಂತ ವಸತಿ ರಹಿತರ ಹಾಗೂ ನಿವೇಶನ ರಹಿತರ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. ಇದರನ್ವಯ ಉತ್ತರ-ಕನ್ನಡ ಜಿಲ್ಲೆಯಲ್ಲಿ 5180 ವಸತಿ ರಹಿತರು, 8465 ನಿವೇಶನ ರಹಿತರಿದ್ದು, ಒಟ್ಟು 13645 ವಸತಿ/ ನಿವೇಶನ ರಹಿತರಿದ್ದಾರೆ.<br><br>2010 ರಿಂದ ಇಲ್ಲಿಯವರೆಗೆ ಉತ್ತರ-ಕನ್ನಡ ಜಿಲ್ಲೆಗೆ ವಿವಿಧ ವಸತಿ ಯೋಜನೆಯಡಿ 78209 ಮನೆಗಳನ್ನು ಮಂಜೂರು ಮಾಡಲಾಗಿದ್ದು, ಸದರಿ ಮನೆಗಳಲ್ಲಿ 49902 ಮನೆಗಳು ಪೂರ್ಣಗೊಂಡಿದ್ದು, 9807 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ, 6276 ಮನೆಗಳು ಪ್ರಾರಂಭವಾಗಬೇಕಾಗಿರುತ್ತದೆ, ಉಳಿದಂತೆ 12224 ನಿಗಧಿತ ಅವಧಿಯಲ್ಲಿ ಪ್ರಾರಂಭವಾಗದೇ ರದ್ದಾಗಿರುತ್ತದೆ. ಜಿಲ್ಲಾವಾರು ತಾಲ್ಲೂಕುವಾರು ಯೋಜನೆವಾರು, ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ. |

| | | |
|---|---|---|
| ಆ) | ವಾಜಪೇಯಿ ವಸತಿ ಯೋಜನೆಯಡಿಯಲ್ಲಿ ಕಾರವಾರ ಜಿಲ್ಲೆಯಲ್ಲಿ 2010 ರಿಂದ ಈವರೆಗೆ ಆಯ್ಕೆಯಾದ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಲಾಗಿದೆಯೇ; (ಜಿಲ್ಲಾವಾರು, ವರ್ಷವಾರು, ಫಲಾನುಭವಿವಾರು ಮಾಹಿತಿ ನೀಡುವುದು) | ವಾಜಪೇಯಿ ವಸತಿ ಯೋಜನೆಯಡಿಯಲ್ಲಿ ಉತ್ತರ-ಕನ್ನಡ ಜಿಲ್ಲೆಯಲ್ಲಿ 2010 ರಿಂದ ಈ ವರೆಗೆ ಆಯ್ಕೆಯಾದ 3295 ಫಲಾನುಭವಿಗಳಿಗೆ ಕಾಮಗಾರಿ ಆದೇಶವನ್ನು ನೀಡಲಾಗಿದೆ. ಜಿಲ್ಲಾವಾರು, ವರ್ಷವಾರು, ಫಲಾನುಭವಿವಾರು ಮಾಹಿತಿ ಯನ್ನು ಅನುಬಂಧ-2ರಲ್ಲಿ ಲಗತ್ತಿಸಲಾಗಿದೆ.<br>ವಾಜಪೇಯಿ ನಿವೇಶನ ಯೋಜನೆಯಡಿಯಲ್ಲಿ ಉತ್ತರ-ಕನ್ನಡ ಜಿಲ್ಲೆಯಲ್ಲಿ 2010 ರಿಂದ ಈ ವರೆಗೆ ಆಯ್ಕೆಯಾದ 173 ಫಲಾನುಭವಿಗಳಿಗೆ ಹಕ್ಕುಪತ್ರವನ್ನು ನೀಡಲಾಗಿದೆ. ಜಿಲ್ಲಾವಾರು, ವರ್ಷವಾರು, ಫಲಾನುಭವಿವಾರು ಮಾಹಿತಿ ಯನ್ನು ಅನುಬಂಧ-3ರಲ್ಲಿ ಲಗತ್ತಿಸಲಾಗಿದೆ. |
| ಇ) | 2010 ರಿಂದ ಈವರೆಗೆ ಜಿಲ್ಲೆಯಲ್ಲಿ ವಾಜಪೇಯಿ ವಸತಿ ಯೋಜನೆಯ ಜವಾಬ್ದಾರಿಯನ್ನು ಯಾರಿಗೆ ನೀಡಲಾಗಿದೆ; ಈವರೆಗೆ ಅವರು ಯಾವ ಯಾವ ಕ್ರಮಗಳನ್ನು ಕೈಗೊಂಡಿರುತ್ತಾರೆ; (ಜಿಲ್ಲಾವಾರು/ ತಾಲ್ಲೂಕುವಾರು ವಿವರ ನೀಡುವುದು) | ವಾಜಪೇಯಿ ವಸತಿ ಯೋಜನೆಯ ಜವಾಬ್ದಾರಿಯನ್ನು ಆಯಾ ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು ಹಾಗೂ ಪುರಸಭೆ/ ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳಿಗೆ ಜವಾಬ್ದಾರಿಯನ್ನು ನೀಡಲಾಗಿರುತ್ತದೆ. ಸರ್ಕಾರದಿಂದ ಹೊರಡಿಸಲಾಗಿರುವ ಸುತ್ತೋಲೆ, ಆದೇಶ ಮತ್ತು ಮಾರ್ಗಸೂಚಿಗಳನ್ವಯ ಕ್ರಮಗಳನ್ನು ಕೈಗೊಂಡಿರುತ್ತಾರೆ. |
| ಈ) | ಈ ಯೋಜನೆಯನ್ನು ಫಲಾನುಭವಿಗಳಿಗೆ ಸರಿಯಾದ ಸಮಯದಲ್ಲಿ ತಲುಪಿಸದೇ ಇದ್ದಲ್ಲಿ, ಹಾಗೂ ಫಲಾನುಭವಿಗಳಿಗೆ ಅವಕಾಶ ಮಾಡಿ ಕೊಡದೇ ಬೇರೆಯವರಿಗೆ ಅವಕಾಶ ಮಾಡಿದಂತಹ ಜವಾಬ್ದಾರಿ ಪಡೆದ ಅಧಿಕಾರಿ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ? (ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ಒದಗಿಸುವುದು) | ವಾಜಪೇಯಿ ವಸತಿ ಯೋಜನೆಯಡಿ ಫಲಾನುಭವಿಗಳಿಗೆ ಅವಕಾಶ ಮಾಡಿಕೊಡದೇ ಬೇರೆಯವರಿಗೆ ಅವಕಾಶ ನೀಡಿದಂತಹ ಯಾವುದೇ ಪ್ರಕರಣಗಳಿರುವುದಿಲ್ಲ. ಆದ್ದರಿಂದ ಅನ್ವಯಿಸುವುದಿಲ್ಲ. |

ವ ಇ 125 ಹೆಚ್‌ಎಎಂ 2020

(ವಿ. ಸೋಮಣ್ಣ)
ವಸತಿ ಸಚಿವರು